ಉಪದೇಶ ಬೇಡ, ಆಗುವುದಾದರೆ ಸಹಾಯ ಮಾಡು

✍️ ಶಾಂತಾರಾಮ ವಿ ಶೆಟ್ಟಿ



ಒಂದು ಹಕ್ಕಿಯ ಮೂರು ಮರಿಗಳು ಆಕಸ್ಮಿಕವಾಗಿ ಸಮುದ್ರದ ಅಲೆಗೆ ಸಿಲುಕಿ ನೀರಿನಲ್ಲಿ ಮುಳುಗುತ್ತವೆ. ದಾರಿ ತೋಚದ ತಾಯಿ ಹಕ್ಕಿಯು ತನ್ನ ಕೊಕ್ಕಿನಲ್ಲಿ ಸಮುದ್ರದ ನೀರನ್ನು ತುಂಬಿಸಿಕೊಂಡು ದೂರ ಹಾರಿ ಹೋಗಿ ಸುರಿಯುತ್ತಾ, ಸಮುದ್ರದ ನೀರನ್ನು ಖಾಲಿ ಮಾಡಲು ಸುರು ಮಾಡುತ್ತದೆ. ಇದನ್ನು ನೋಡಿದ ಮತ್ತೊಂದು ಹಕ್ಕಿ ಬಂದು ವಿಷಯವೇನೆಂದು ಕೇಳುತ್ತದೆ.

ತಾಯಿ ಹಕ್ಕಿಯು ಸಮುದ್ರದ ನೀರನ್ನು ಖಾಲಿ ಮಾಡುವ ವಿಷಯ ತಿಳಿಸಿದಾಗ, ಆ ಹಕ್ಕಿ ನಗುತ್ತಾ ಹೇಳುತ್ತದೆ "ಇದು ಆಗುವ ಕೆಲಸವೇ? ಪುಟ್ಟ ಕೊಕ್ಕಿನಲ್ಲಿ ನೀರು ಎಂದು ಖಾಲಿಯಾದೀತು?" ಆಗ ತಾಯಿ ಹಕ್ಕಿ ಹೀಗೆನ್ನುತ್ತದೆ:

"ನಿನ್ನ ಉಪದೇಶಗಳೆಲ್ಲ ನನಗೆ ಬೇಡ, ಆಗುವುದಾದರೆ ನನ್ನ ಜೊತೆ ಸೇರಿ ನೀರು ಖಾಲಿ ಮಾಡಲು ಸಹಾಯ ಮಾಡು."

ಆ ಹಕ್ಕಿ ಕೂಡ ತಾಯಿ ಹಕ್ಕಿಯ ಜೊತೆ ಸೇರಿ ನೀರು ಖಾಲಿ ಮಾಡಲು ಶುರು ಮಾಡುತ್ತದೆ. ಹೀಗೆ ಬಂದ ಹಕ್ಕಿಗಳೆಲ್ಲ ತಾಯಿ ಹಕ್ಕಿಯ ಜೊತೆಗೂಡುತ್ತವೆ. ಸಾವಿರಾರು, ಲಕ್ಷಾಂತರ ಹಕ್ಕಿಗಳು ಒಟ್ಟಾಗಿ ನೀರು ಖಾಲಿ ಮಾಡುವುದನ್ನು ವಿಷ್ಣುವಿನ ವಾಹನವಾದ ಗರುಡ ನೋಡುತ್ತಾನೆ. "ಏನಿದು ತಮಾಷೆ?" ಎಂದು ಹತ್ತಿರ ಬಂದು ಒಂದು ಹಕ್ಕಿಯನ್ನು ಕೇಳುತ್ತಾನೆ.

ನಾವು ಹಕ್ಕಿಗಳೆಲ್ಲ ಸೇರಿ ಸಮುದ್ರದ ನೀರನ್ನು ಖಾಲಿ ಮಾಡಿ, ಆ ತಾಯಿ ಹಕ್ಕಿಯ ಮುಳುಗಿದ ಮರಿಗಳನ್ನು ರಕ್ಷಿಸಲು ಪ್ರಯತ್ನಿಸುತ್ತಿದ್ದೇವೆ ಎಂದು ಹಕ್ಕಿ ಉತ್ತರಿಸುತ್ತದೆ. ಗರುಡನು ಕೂಡ ಉಳಿದ ಹಕ್ಕಿಗಳಂತೆ "ಇದು ಸಾಧ್ಯವೇ?" ಎಂದು ನಗುತ್ತಾನೆ. ಆಗ ಹಕ್ಕಿಯು, "ನಿನ್ನ ಉಪದೇಶ ಬೇಡ, ಸಾಧ್ಯವಾದರೆ ನಮಗೆ ಸಹಾಯ ಮಾಡು" ಎನ್ನುತ್ತದೆ. ಗರುಡನೂ ಆ ಹಕ್ಕಿಗಳ ಜೊತೆ ಸೇರಿ ನೀರು ಖಾಲಿ ಮಾಡಲು ಆರಂಭಿಸುತ್ತಾನೆ.

ವಿಷ್ಣು ದೇವರು ಸಂಚಾರಕ್ಕೆ ಹೊರಡಲು ಗರುಡನನ್ನು ಹುಡುಕಿದಾಗ, ಗರುಡನು ಹಕ್ಕಿಗಳ ಜೊತೆ ಇರುವುದು ತಿಳಿಯುತ್ತದೆ. ಅಲ್ಲಿಗೆ ಬಂದು ವಿಚಾರಿಸಿದಾಗ ಗರುಡನ ಉತ್ತರ ಕೇಳಿ ವಿಷ್ಣು ಕೂಡ "ಇದು ನಡೆಯುವ ಮಾತೇ?" ಎಂದು ನಗುತ್ತಾರೆ. ಗರುಡನು ವಿಷ್ಣುವಿಗೆ, "ನಿನ್ನ ಉಪದೇಶ ನಮಗೆ ಬೇಡ, ಆಗುವುದಾದರೆ ನಮ್ಮ ಜೊತೆ ಸೇರಿ ಸಹಾಯ ಮಾಡು" ಎಂದು ಹೇಳುತ್ತಾನೆ. ವಿಷ್ಣು ದೇವರು ಕೂಡ ಅವರೆಲ್ಲರ ಜೊತೆ ಸೇರಿ ಒಂದು ಕೊಡಪಾನ ಹಿಡಿದು ನೀರು ಖಾಲಿ ಮಾಡಲು ಸುರು ಮಾಡುತ್ತಾರೆ.

ಈ ವಿಷಯ ಸಮುದ್ರ ರಾಜನಿಗೆ ತಿಳಿಯುತ್ತದೆ. "ಇನ್ನು ದೇವರು ನನ್ನ ನೀರನ್ನೆಲ್ಲ ಖಾಲಿ ಮಾಡಿದರೆ ನನ್ನ ಗತಿಯೇನು?" ಎಂದು ಹೆದರಿ ಓಡಿ ಬಂದು ದೇವರ ಕಾಲಿಗೆ ಬೀಳುತ್ತಾನೆ. "ನನ್ನಿಂದಾದ ತಪ್ಪೇನು?" ಎಂದು ಕೇಳುತ್ತಾನೆ. ವಿಷ್ಣುವು, "ಈ ತಾಯಿ ಹಕ್ಕಿಯ ಮೂರು ಮರಿಗಳು ನಿನ್ನ ಒಡಲಲ್ಲಿ ಮುಳುಗಿವೆ, ಅವುಗಳನ್ನು ತಂದುಕೊಡು" ಎನ್ನುತ್ತಾರೆ.

ಸಮುದ್ರ ರಾಜನು ಹೋಗಿ ಮೂರು ಮರಿಗಳನ್ನು ತಂದು ಆ ತಾಯಿ ಹಕ್ಕಿಯ ಕೈಗಿಡುತ್ತಾನೆ.

ನೀತಿ:

ನಾವು ಒಂದು ಕೆಲಸ ಮಾಡುವಾಗ ಅಡ್ಡಗಾಲು ಹಾಕುವವರು ಬಹಳ ಜನ ಬರುತ್ತಾರೆ. ಆದರೆ ನಾವು ಭಯ ಭಕ್ತಿಯಿಂದ, ದೃಢ ಸಂಕಲ್ಪದಿಂದ ಕೆಲಸ ಮಾಡಿದರೆ, ಅದಕ್ಕೆ ಸಿಗಬೇಕಾದ ಫಲ ಖಂಡಿತವಾಗಿಯೂ ಸಿಗುತ್ತದೆ.